# ಗುಡಿಯ ನೋಡಿರಣ್ಣ

ಜಗತ್ತಿನ ಅನುಭಾವಿಗಳು, ಸಂತರು ಸಾಂಸ್ಥಿಕ ಮಂದಿರಗಳಾದ ಗುಡಿ, ಪುಣ್ಯಕ್ಷೇತ್ರಗಳು ಮತ್ತು ಅಧಿಕಾರ ಕೇಂದ್ರದ ಅರಮನೆಗಳನ್ನು ತಿರಸ್ಕರಿಸಿದರು. ಈ ಅನುಭಾವಿಗಳೆಲ್ಲಾ ತಮ್ಮ ದೇಹವನ್ನೇ ದೇಗುಲವನ್ನಾಗಿ, ಪುಣ್ಯಕ್ಷೇತ್ರವನ್ನಾಗಿ ಪರಿವರ್ತಿಸಿಕೊಂಡು, ತಮ್ಮ ನಿತ್ಯ ಕಾಯಕದಲ್ಲೇ ದೈವವನ್ನು ಕಂಡರು. ದೇವರು ಇರುವುದು ಅಂತರಂಗದಲ್ಲಿ, ಬಡವರು ಹಾಗೂ ಅಸಹಾಯಕ ಜನರ ಬಗ್ಗೆ ತೋರುವ ಪ್ರೇಮದಲ್ಲಿ ಎಂದು ಅವರು ಗಾಢವಾಗಿ ತಿಳಿದಿದ್ದರು. ಬಹುಜನರಲ್ಲಿರುವ ಬದುಕಿನ ಸ್ವಾರಸ್ಯಕರ ಸಂಕೀರ್ಣತೆ ಹಾಗೂ ಹಾಗೂ ಬಹುತ್ವದ ಧ್ವನಿಗಳನ್ನು ಹೊರಗಿಟ್ಟಿರುವ, ಚೈತನ್ಯ ಮತ್ತು ಕ್ರಿಯಾಶೀಲತೆ ಇಲ್ಲದ ಅರಮನೆ ಮತ್ತು ದೇವಾಲಯಗಳಲ್ಲಿ ತಾವು ಕಾಣುವಂಥದ್ದೇನೂ ಇಲ್ಲ ಎಂದು ಅವರು ಭಾವಿಸಿದ್ದರು.

'ಅರಸು ವಿಚಾರ ಸಿರಿಯ ಸಿಂಗಾರ ಸ್ಥಿರವಲ್ಲ ಮಾನವ', 'ಅರಸು ಅಧಿಕಾರಿಗಳ ಭಕ್ತಿ/ ಗೌರಿ ನನಗೆ ಸಲ್ಲುವುದಿಲ್ಲ/ ಪರಿಪರಿ ನೋಯಿಸಿ ದಂಡಿಸಿ ತಂದ ದ್ರವ್ಯ ಕೆಟ್ಟದು' ಎಂದು ದಿಟ್ಟವಾಗಿಯೇ ನುಡಿದ ಕನ್ನಡದ ಅನುಭಾವಿಗಳು ಪ್ರಭುತ್ವದ ಕಡು ವಿರೋಧಿಗಳು. ಈ ಅನುಭಾವಿಗಳು ಸಿಂಹಾಸನಕ್ಕೆ ಶಿರವು ಬಾಗದೆ ಈದ ಹುಲಿಯಂತೆ ಪ್ರಭುತ್ವದಿಂದ ಅಂತರ ಕಾಯ್ದುಕೊಂಡಿದ್ದರು.

ನಿಜವಾದ ಸಂತರು, ಯೋಗಿಗಳು, ಜನತೆಯ ಅಗತ್ಯತೆಗಳಿಗೆ ಕಿವಿಗೊಡದ ಅಧಿಕಾರ ವ್ಯವಸ್ಥೆ ಹಾಗೂ ಧಾರ್ಮಿಕ ಕೇಂದ್ರಗಳ ವಿರುದ್ಧವೇ ಈಸುವವರು. ಇದು ಅನುಭಾವಿಗಳ ಲೋಕದ ಮೂಲಗುಣ. ಕುವೆಂಪು ಅವರ 'ಜಲಗಾರ' ನಾಟಕ ಕಾಯಕದಲ್ಲೇ ಇರುವ ದೈವದ ಸತ್ಯ ದರ್ಶನವನ್ನು ತೋರಿದ ವೈಚಾರಿಕ ಕೃತಿ. 'ದಕ್ಷಿಣೆಯ ಹಬ್ಬ; ಹಣ್ಣುಕಾಯಿನ ದುಡ್ಡು, ತೀರ್ಥ ಮಾರಿದ ದುಡ್ಡು.... ಗುಡಿಯ ದೆಸೆಯಿಂದ ಹಿಟ್ಟು ಹೊಟ್ಟೆಗೆ, ದುಡ್ಡು ಬಟ್ಟೆಗೆ' ಎಂದು ಬದುಕುತ್ತಿದ್ದ ಪರಾವಲಂಬಿ ಜೀವಿಗಳನ್ನು, ಎಂದೂ ದೇವಾಲಯಕ್ಕೆ ಹೋಗದ ಊರ ಜಲಗಾರನ ಮೂಲಕ ಪ್ರಶ್ನಿಸುವ ಈ ನಾಟಕ, ನಿಜವಾದ ದೈವವಿರುವುದು 'ಬಡವನೆದೆಯಲ್ಲಿ.. ಉಳುತ್ತಿರುವ ಒಕ್ಕಲಿಗನೆಡೆಯಲ್ಲಿ..' ಎಂದು ಹೇಳುವ ಮೂಲಕ ಶ್ರಮಜೀವಿಗಳ ಪರವಾದ ದರ್ಶನವನ್ನು ಕಟ್ಟಿಕೊಟ್ಟಿದೆ. ಬಡವರ, ರೈತರ ದುಡಿಮೆಗೆ 'ಅನುಗ್ರಹ' ತೋರದ ದೇವಾಲಯವನ್ನು ನಿರಾಕರಿಸುತ್ತದೆ. ಇದೆಲ್ಲವನ್ನೂ ತಿಳಿದಿದ್ದ ಖಲೀಲ್ ಗಿಬ್ರಾನ್ ಸುಭಾಷಿತದಂತಹ ಮಾತು ಹೇಳಿದ 'ನಿಮ್ಮ ದಿನನಿತ್ಯದ ಬದುಕೇ ನಿಮ್ಮ ದೇವಾಲಯ'.

ಪುಣ್ಯಕ್ಷೇತ್ರ ದರ್ಶನದ ಬಗ್ಗೆಯೂ ಇದೇ ಬಗೆಯ ಅನಾದರ ಸಂತರಲ್ಲಿ ಕಂಡುಬರುತ್ತದೆ. 'ಶ್ರೀಗಿರಿಯ ಸುಕ್ಷೇತ್ರಕಿಂದು / ಹೋಗಿ ಯಾತ್ರೆಯ ಮಾಡಿ ಬಂದೆ / ಶ್ರೀಗಿರಿಯು ಶರೀರದೊಳಗುಂಟು| ಓಂ ಶ್ರೀಗುರುಸಿದ್ಧ / ಯೋಗಿ ಜನರಿಗೆ ಮರ್ಮವು ಬೇರುಂಟು' ಎನ್ನುತ್ತಾರೆ ಸರ್ಪಣಾರ್ಯರು.

'ಕಾಬಾದಲ್ಲಿ ಹುಡುಕಿದೆ, ಅಲ್ಲಿಲ್ಲ / ಯಾವ ದೇವಾಲಯದಲ್ಲೂ ಅವನಿಲ್ಲ / ಜ್ಞಾನಿಗಳ ಕಂಡೆ, ಅವರಲ್ಲಿ ಕೇಳಿದೆ / ತಾರ್ಕಿಕರು ಜಿನುಗುಟ್ಟಿದರೂ ಅವನಿಲ್ಲ / ಭವ್ಯ ಆಸ್ಥಾನಗಳಲ್ಲಿ ಅರಸಿದೆ / ಅಲ್ಲೂ ಅವನಿಲ್ಲ / ಕಡೆಗೆ ನನ್ನ ಹೃದಯದೊಳಗೆ ಹೊಕ್ಕು ನೋಡಿದೆ / ಅರೆ, ಅವನಿಲ್ಲೇ ಇದ್ದಾನೆ/ ಅವನು ಬೇರೆಲ್ಲೂ ಇಲ್ಲ, ಅಂತರಂಗದಲ್ಲೇ ಇದ್ದಾನೆ' ಎಂದು ಸೂಫಿ ಕವಿ ರೂಮಿ ತನ್ನಲ್ಲೇ ದೇವರನ್ನು ಕಂಡುಕೊಂಡ. ಲಿಯೋ ಟಾಲ್‌ಸ್ಟಾಯ್ ತನ್ನ 'ಇಬ್ಬರು ಮುದುಕರು' ಕತೆಯಲ್ಲಿ ದೇವರು, ಪುಣ್ಯಕ್ಷೇತ್ರ ದರ್ಶನದ ತಿಳಿವನ್ನೇ ಬುಡಮೇಲು ಮಾಡಿ, ಬಡವರಿಗೆ, ನೊಂದವರಿಗೆ ಸಕಾಲದಲ್ಲಿ ಪ್ರೇಮದಿಂದ ನೆರವು ನೀಡುವುದೇ ಮನುಷ್ಯನ ಮೊದಲ ಕರ್ತವ್ಯವೆಂದು ತೋರಿಸಿದ. ಇತರ ಎಲ್ಲ ಶಕ್ತಿಗಿಂತ ಮಾನವ ಪ್ರೇಮವೇ ಎಲ್ಲಕ್ಕೂ ಮಿಗಿಲು ಎನ್ನುವುದು ಈ ಕತೆಯ ಮುಖ್ಯ ದರ್ಶನ.

'ನೀನು ಸುಳ್ಳು ಹೇಳದಿದ್ದರೆ, ಜೀವಹಾನಿ ಮಾಡದಿದ್ದರೆ, ನಿನಗೆ ನೀಡದ್ದನ್ನು ತೆಗೆದುಕೊಳ್ಳದಿದ್ದರೆ, ನಿನ್ನನ್ನು ನೀನೆ ನಿರಾಕರಿಸುವವನಾಗಿದ್ದರೆ, ಗಯಾಕ್ಕೆ ಹೋಗಿ ಏನು ಪ್ರಯೋಜನ?' ಎನ್ನುತ್ತದೆ ಬುದ್ಧವಚನ. ಹೊರಗಿನ ಯಾವುದೇ 'ದಿವ್ಯ' ಶಕ್ತಿಗಳ ಸಹಾಯವಿಲ್ಲದೆ ಪ್ರಕೃತಿಯ ನಡುವೆ ಶಾಂತಿ ಮತ್ತು ವಿವೇಚನೆಯನ್ನು ಪಡೆದುಕೊಂಡ ಬುದ್ಧದೇವನೆ ನಮಗೆ ಇರುವ ಬಹುದೊಡ್ಡ ರೂಪಕ.

ಜಾತಿ ಮತ್ತು ತರತಮ ಭಾವಗಳನ್ನು ಬಹಿರಂಗವಾಗಿಯೇ ಆಚರಿಸುವ ಸಾಂಸ್ಥಿಕ ಕೇಂದ್ರಗಳ ನಿರಾಕರಣೆ ಕನ್ನಡದ ಅನುಭಾವಿ ಪರಂಪರೆಯುದ್ದಕ್ಕೂ ಕಂಡುಬರುತ್ತದೆ. ಆದ್ದರಿಂದಲೇ ನಮ್ಮ ವಚನಕಾರರರು ಬಹಿರಂಗದ ಗುಡಿ ಗೋಪುರಗಳನ್ನು ದೂರತಳ್ಳಿ, ತಮ್ಮ ದೇಹವನ್ನೇ ದೇಗುಲವನ್ನಾಗಿ ರೂಪಾಂತರಿಸಿಕೊಂಡರು.

ಶಿಶುನಾಳ ಶರೀಫರಂತೂ 'ಗುಡಿಯ ನೋಡಿರಣ್ಣಾ ದೇಹದ ಗುಡಿಯ ನೋಡಿರಿ..' ಎಂದು ತಮ್ಮ ದೇಹವನ್ನೇ ದೈವದ ಗುಡಿಯನ್ನಾಗಿ ಮಾಡಿಕೊಂಡರು. ಜಾತ್ಯತೀತ ಮತ್ತು ವೈಚಾರಿಕವಾದ ಕನ್ನಡ ಸಾಹಿತ್ಯ ಪರಂಪರೆಯ ಹೆಮ್ಮೆಯ ಭಾಗ ಇದು. ಮಹಾತ್ಮ ಗಾಂಧಿ ಅವರಂತೂ ಅಸ್ಪೃಶ್ಯತೆಯನ್ನು ಆಚರಿಸುವ ದೇವಾಲಯಗಳ ಮೆಟ್ಟಿಲನ್ನೂ ತುಳಿಯಲಿಲ್ಲ! ಶಾಂತಿ, ದಯೆ, ಕ್ಷಮಾಗುಣವನ್ನು ತಂದುಕೊಡದ ನಿರ್ಜೀವ ಕೇಂದ್ರಗಳನ್ನು ನಮ್ಮ ಸಂತರು, ಅನುಭಾವಿಗಳು ದೂರ ಮಾಡಿರುವುದು ಈ ಕಾರಣಕ್ಕೆ.

ನಮ್ಮೊಳಗೆ ಕವಿದಿರುವ ದ್ವೇಷ, ಭಯ, ನಿರಾಶೆಗಳ ಅಂಧಕಾರವನ್ನು ಹೊಡೆದೋಡಿಸುವ ಚೈತನ್ಯ ಈ ಸಂತರ ದೀಪ್ತಿಯಂತಹ ನುಡಿಗುಚ್ಛಗಳಲ್ಲಿ ತಣ್ಣಗೆ ಉರಿಯುತ್ತಿದೆ. ಈ ನುಡಿಬೆಳಕಲ್ಲಿ ಮನಸ್ಸು ಸಂಕುಚಿತತೆಗಳ ಬಂಧನದಿಂದ ವಿಮೋಚನೆಗೊಂಡು, ಸ್ವಾತಂತ್ರ್ಯ, ಸೃಜನಶೀಲತೆ, ನಿರ್ಭಯ ವಾತಾವರಣ ಮತ್ತು ನಿಸ್ವಾರ್ಥದೆಡೆಗೆ ಚಲಿಸುತ್ತದೆ. ಇದು ಸಂತರು ನಡೆದ ಸತ್ಯಪಥ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.
  —ಸ್ವಾಮಿ ವಿವೇಕಾನಂದ
- ನೀವು ಬೇರೆಯವರಿಗಾಗಿ ಒಂದು ದೀಪ ಹಚ್ಚಿ. ಅದು ನಿಮ್ಮ ದಾರಿಗೂ ಬೆಳಕಾಗುತ್ತದೆ.
  —ಗೌತಮ ಬುದ್ಧ
- ಧರ್ಮ ಎಂಬುದು ಭಗವಂತ ಮತ್ತು ಮನುಷ್ಯನ ಬಗ್ಗೆ ಪ್ರೀತಿಯಲ್ಲದೆ ಬೇರೇನೂ ಅಲ್ಲ.
  —ಶಂಕರಾಚಾರ್ಯ
- ಜ್ಞಾನಕ್ಕೆ ವಿದ್ಯೆಯೂ, ವಿದ್ಯೆಗೆ ಓದು ಬರಹವೂ ತಳಹದಿ.
  —ಬಿಎಂಶ್ರೀ
- ಕಷ್ಟಪಟ್ಟು ದುಡಿಯಬೇಕೆನ್ನುವುದು ಜೀವನದ ಧ್ಯೇಯವಾದರೆ, ಅದೃಷ್ಟ ಎನ್ನುವುದು ಮನೆ ಬಾಗಿಲಿಗೆ ಬರಲಿದೆ.
  —ಗೋಲ್ಡ್ ಸ್ಮಿತ್
- ಪ್ರಾಣಿ ಜೀವನ ಮಿತವಾದುದು. ಮನುಷ್ಯ ಜೀವನ ಬಹುಮುಖವಾದದ್ದು.
  —ಶಿವರಾಮ ಕಾರಂತ
- ಮನಸ್ಸು ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸಿಕೊಳ್ಳದ ಹೊರತು ಇನ್ನಾವುದೂ ಸರಿಯಾಗದು.
  —ಡಿ.ವಿ. ಗುಂಡಪ್ಪ
- ಮಕ್ಕಳು, ನಾವು ಹೇಳುವುದನ್ನು ಕಲಿಯುವುದಿಲ್ಲ, ನಾವು ಮಾಡುವುದನ್ನು ನೋಡಿ ಕಲಿಯುತ್ತಾರೆ
  —ಖಲೀಲ್ ಗಿಬ್ರಾನ್
- ನಾವೆಲ್ಲ ಒಂದೇ ಮನೆಯವರಣ್ಣ ತಮ್ಮದಿರು ನಮ್ಮೆಲ್ಲರನು ಪಡೆದುದೊಂದೆ ನಾಡಿನ ಬಸಿರು ಎಂದು ನಮಗೆ ಇನ್ನಾರೆದುರು
  —ಮಾಸ್ತಿ ವೆಂಕಟೇಶ ಅಯ್ಯಂಗಾರ್